StudentBounty.com

# First Semester of Five Year B.B.A., LL.B. (Hons.) Examination, January 2012
## GENERAL PRINCIPLES OF CONTRACT (Course – IV)

Duration : $2^1/_2$ Hours Max. Marks : 70

**Instructions** : 1. Answer all **5** Questions.
2. **One** essay type and **one** short note question from **each unit** have to be attempted i.e. part **(a)** and part **(b)** in all units.
3. Figures to the **right** indicate marks.
4. Answer should be written **either** in **English** or **Kannada.**

### UNIT – I

Q. No. 1. (a) Discuss the essential requirements of formation of the contract. Marks : 9

ಕರಾರು ರಚಿಸುವಲ್ಲಿ ಬೇಕಾದ ಅವಶ್ಯ ಸಂಗತಿಗಳನ್ನು ಚರ್ಚಿಸಿರಿ.

OR/**ಅಥವಾ**

Explain consideration as an element of a valid contract and discuss the effects of :

a) Total absence of consideration and

b) Inadequacy of consideration.

ಪ್ರತಿಫಲವು ಒಂದು ಊರ್ಜಿತ ಕರಾರಿನ ಆವಶ್ಯ ಸಂಗತಿ ಎಂಬುದನ್ನು ವಿವರಿಸಿರಿ ಮತ್ತು

a) ಸಂಪೂರ್ಣವಾಗಿ ಪ್ರತಿಫಲ ಇಲ್ಲದಿರುವಿಕೆ ಹಾಗೂ

b) ಅಸಮರ್ಪಕ ಪ್ರತಿಫಲದ ಪರಿಣಾಮಗಳನ್ನು ಚರ್ಚಿಸಿರಿ.

(b) Write short note on privity of contract. Marks : 5

'ಕರಾರಿನಲ್ಲಿ ಭಾಗಿ'ಯ ಮೇಲೆ ಲಘು ಟಿಪ್ಪಣಿ ಬರೆಯಿರಿ.

OR/**ಅಥವಾ**

Write short note on rules relating to communication and revocation of offer.

ಪ್ರಸ್ತಾಪವನ್ನು ತಿಳಿಸುವಿಕೆ ಮತ್ತು ರದ್ದುಪಡಿಸುವಿಕೆಯಲ್ಲಿರುವ ನಿಯಮಗಳ ಮೇಲೆ ಲಘು ಟಿಪ್ಪಣಿ ಬರೆಯಿರಿ.

**P.T.O.**

www.StudentBounty.com

StudentBounty.com

## UNIT – II

Q. No. 2. (a) "Every person is competent to contract who is of the age of majority according to the law to which he is subject...." Comment Marks : 9

''ಎಲ್ಲಾ ವ್ಯಕ್ತಿಗಳು, ಅವರಿಗೆ ಅನ್ವಯಿಸುವ ಕಾನೂನಿಗೆ ಒಳಪಟ್ಟು, ಕರಾರು ಮಾಡಲು ಅರ್ಹರಿರುತ್ತಾರೆ...'' ವಿಮರ್ಶಿಸಿ.

OR/**ಅಥವಾ**

Define fraud. Discuss the effect and remedies available to a party, whose consent has been obtained by fraud.

ಮೋಸದ ವ್ಯಾಖ್ಯೆ ಕೊಡಿ. ಪಕ್ಷಗಾರನ ಸಮ್ಮತಿಯನ್ನು ಮೋಸದಿಂದ ಪಡೆದಾಗ ಆಗುವ ಪರಿಣಾಮ ಮತ್ತು ಲಭ್ಯವಿರುವ ಪರಿಹಾರಗಳನ್ನು ಚರ್ಚಿಸಿರಿ.

(b) A, a person of sound mind but on full moonday he is not of sound mind. A borrowed ₹ 1,000 from B on full moonday promising B that he will repay after 15 days. Subsequently A fails to pay the promised amount. Can B recover the promised amount from A ? Decide. Marks : 5

A ಎಂಬವನು ಸ್ವಸ್ಥ ಚಿತ್ತವುಳ್ಳವ ಆದರೆ ಹುಣ್ಣಿಮೆಯ ದಿನ ಸ್ವಾಸ್ಥ ಚಿತ್ತ ಇಲ್ಲದಿರುವ ವ್ಯಕ್ತಿ. ಹುಣ್ಣಿಮೆಯ ದಿನ B ಎಂಬವನಿಂದ ₹ 1,000 ಸಾಲ ಪಡೆದು 15 ದಿನಗಳ ತರುವಾಯ ಮರಳಿಸುವುದಾಗಿ ವಾಗ್ದಾನ ಮಾಡಿ ಪಡೆದಿರುತ್ತಾನೆ. ತದ ನಂತರ ವಾಗ್ದಾನ ಮಾಡಿದಂತೆ ಹಣ ಮರಳಿಸಲು ವಿಫಲನಾಗಿರುತ್ತಾನೆ. B ಯು A ಯಿಂದ ವಾಗ್ದಾನ ಮಾಡಿರುವಂತೆ ಹಣ ಮರಳಿ ಪಡೆಯಬಹುದೆ ? ತೀರ್ಮಾನಿಸಿರಿ.

OR/**ಅಥವಾ**

A makes a contract with B to buy B's horse if A survives C. When can B enforce this contract ? What is the nature of contract ?

A ಯು B ಗೆ, ಒಂದು ವೇಳೆ A ಯು C ಯ ಮರಣದ ನಂತರ ಬದುಕಿದ್ದರೆ B ಯ ಕುದುರೆಯನ್ನು ಖರೀದಿಸುವುದಾಗಿ ಕರಾರು ಮಾಡಿಕೊಂಡಿರುತ್ತಾನೆ. ಯಾವಾಗ B ಯ ಕರಾರು ಜಾರಿಗೊಳಿಸಬಹುದು ? ಕರಾರಿನ ಸ್ವಭಾವ ಏನು ?

www.StudentBounty.com

StudentBounty.com

## UNIT – III

Q. No. 3. (a) Explain the rules relating to devolution of joint liabilities and rights in performance of joint promises. Marks : 9

ಜಂಟಿ ವಾಗ್ದಾನಗಳ ಪೂರೈಸುವಲ್ಲಿ ಜಂಟಿ ಹೊಣೆಗಾರಿಕೆಗಳ ಮತ್ತು ಹಕ್ಕುಗಳ ಪ್ರಾಪ್ತಿಯನ್ನು ವಿವರಿಸಿರಿ.

OR/**ಅಥವಾ**

What do you mean by Frustration ? Explain, with the help of decided cases specific grounds of Frustration.

ಭಗ್ನತೆ ಎಂದರೇನು ? ತೀರ್ಮಾನಿಸಲ್ಪಟ್ಟ ಪ್ರಕರಣಗಳ ಸಹಾಯದಿಂದ ಭಗ್ನತೆಗೆ ನಿರ್ದಿಷ್ಟವಾದ ಆಧಾರಗಳನ್ನು ವಿವರಿಸಿರಿ.

(b) A owes three debts to B. In that first debt is barred by law of limitation. A tenders ₹ 1,000 to B, without specifying to which that is to be appropriated. B appropriates it to time barred debt. Subsequently A disputes it. Can A succeed ? Decide. Marks : 5

A ಯು B ಯಿಂದ ಮೂರು ಸಾಲಗಳನ್ನು ಪಡೆದಿರುತ್ತಾನೆ. ಅದರಲ್ಲಿ ಮೊದಲನೆಯ ಸಾಲವು ಕಾಲ ಮಿತಿಯಿಂದ ಹೊರಗಿರುತ್ತದೆ. A ಯು B ನಿಗೆ ₹ 1,000 ಗಳನ್ನು ಯಾವುದೇ ನಿರ್ದಿಷ್ಟ ಸಾಲ ಮರುಪಾವತಿ ಎಂದು ಹೇಳದೆ ಕೊಟ್ಟಿರುತ್ತಾನೆ. B ಯು ಆ ಹಣವನ್ನು ಕಾಲಮಿತಿಯ ಹೊರಗಿರುವ ಸಾಲಕ್ಕೆ ಹೊಂದಾಣಿಕೆ ಮಾಡುತ್ತಾನೆ. ತದ ನಂತರ A ಯು ಹೊಂದಾಣಿಕೆಯನ್ನು ವಿರೋಧಿಸುತ್ತಾನೆ. A ಯು ಜಯಶಾಲಿಯಾಗಬಹುದೆ ? ತೀರ್ಮಾನಿಸಿರಿ.

OR/**ಅಥವಾ**

A and B contract that A shall deliver goods to B to be paid by B on delivery. Decide the order of performance of contract i.e. when shall A has to pay and when B shall deliver the goods ?

A ಮತ್ತು B ಎಂಬವರು A ಯು B ಗೆ ಸರಕನ್ನು B ಯು ಹಣ ಪಾವತಿ ಮಾಡಿದ ಮೇಲೆ ಸ್ವಾಧೀನ ಕೊಡತಕ್ಕದು ಎಂಬ ಕರಾರು ಮಾಡಿಕೊಂಡಿದ್ದಾರೆ. ಕರಾರನ್ನು ಯಾವ ರೀತಿ ಪೂರೈಸಬೇಕು ಎಂಬ ಕ್ರಮ ಅಂದರೆ ಯಾವಾಗ A ಯು ಸರಕಿನ ಸ್ವಾಧೀನ ಮತ್ತು B ಯು ಯಾವಾಗ ಹಣ ಪಾವತಿ ಮಾಡಬೇಕು ಎಂಬುದನ್ನು ತೀರ್ಮಾನಿಸಿರಿ.

www.StudentBounty.com

StudentBounty.com

## UNIT – IV

Q. No. 4. (a) Discuss in brief, the various remedies available for breach of contract. Marks : 9

ಕರಾರು ಉಲ್ಲಂಘನೆಯಾದಾಗ ಲಭ್ಯವಿರುವ ವಿವಿಧ ಪರಿಹಾರಗಳನ್ನು ಸಂಕ್ಷಿಪ್ತವಾಗಿ ಚರ್ಚಿಸಿರಿ.

OR/**ಅಥವಾ**

What is injunction ? Who and against whom an injunction may be obtained ?

ನಿರ್ಭಂದಾಜ್ಞೆ ಎಂದರೇನು ? ಯಾರು ಮತ್ತು ಯಾರ ವಿರುದ್ಧ ನಿರ್ಭಂದಾಜ್ಞೆಯನ್ನು ಪಡೆಯಬಹುದು ?

(b) Write note on Quasi-contracts. Marks : 5

'ಅರೆ-ಕರಾರು' ಇದರ ಮೇಲೆ ಟಿಪ್ಪಣಿ ಬರೆಯಿರಿ.

OR/**ಅಥವಾ**

Write notes on kinds of Damages.

ವಿವಿಧ ಪರಿಹಾರಗಳ ಮೇಲೆ ಟಿಪ್ಪಣಿ ಬರೆಯಿರಿ.

## UNIT – V

Q. No. 5. (a) Explain the requirements to chain specific performance of a contract. Marks : 9

ಕರಾರಿನ ನಿರ್ದಿಷ್ಟ ಅನುಷ್ಠಾನ ಪಡೆಯಲು ಪೂರೈಸಬೇಕಾದ ಅಂಶಗಳನ್ನು ವಿವರಿಸಿರಿ.

OR/**ಅಥವಾ**

Explain the provisions relating to recovery of movable and immovable property.

ಚರ ಮತ್ತು ಸ್ಥಿರ ಸ್ವತ್ತನ್ನು ಮರಳಿ ಪಡೆಯುವಲ್ಲಿ ಅನ್ವಯಿಸುವ ನಿಯಮಗಳನ್ನು ವಿವರಿಸಿರಿ.

(b) Write short note on : Marks : 5

ಲಘು ಟಿಪ್ಪಣಿ ಬರೆಯಿರಿ.

Kinds of Government contracts.

ಸರಕಾರಿ ಕರಾರುಗಳ ವಿಧಗಳು.

OR/**ಅಥವಾ**

Power of court to grant relief.

ಪರಿಹಾರ ನೀಡುವಲ್ಲಿ ನ್ಯಾಯಾಲಯದ ಅಧಿಕಾರಗಳು.

---

www.StudentBounty.com